ಓ ಎಸ್ ನಂಃ 586-14
ಪಿ ಡಬ್ಲ್ಯೂ ಃ 1

ದಿಃ 29-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಎಸ್ ಆರ್ ವಕೀಲರಿಂದ

14. ನನ್ನ ತಂದೆಗೆ ಆರು ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಮಗ ಇರುತ್ತಾರೆ. ನನ್ನ ತಂದೆ ಬಿಡಬ್ಲ್ಯೂಎಸ್ಎಸ್ ನಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ನಮ್ಮ ಕುಟುಂಬದ ವ್ಯವಸ್ಥೆ ಹಾಗೂ ವ್ಯವಹಾರವನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು. ನನ್ನ ಮದುವೆ 1985 ರ ಮೇ ಲ್ಲಿ ಆಗಿರುತ್ತದೆ. ನನ್ನ ಗಂಡನ ಹೆಸರು ಗಂಗಾಧರಯ್ಯ ಆಗಿರುತ್ತೆ. ನನ್ನ ಮದುವೆಯನ್ನು 1 ನೇ ಪ್ರತಿವಾದಿ ಮಾಡಿರುತ್ತಾರೆ. ಮದುವೆ ಆಗುವಾಗ 1 ನೇ ಪ್ರತಿವಾದಿ ತಮ್ಮ ಸ್ವಂತ ಊರಾದ ತಿಪ್ಪೇನಹಳ್ಳಿ, ನಾಗಸಂದ್ರ ಪೋಸ್ಟ್ ಅಲ್ಲಿ ವಾಸವಿದ್ದರು. ಮದುವೆ ಸಮಯದಲ್ಲಿ 1 ನೇ ಪ್ರತಿವಾದಿ ನನ್ನ ಜೀವನಕ್ಕೆ ಏನೂ ಕೊಟ್ಟಿರಲಿಲ್ಲ. ನನ್ನ ಮದುವೆ ಆದ ನಂತರ ನನ್ನ ಕುಟುಂಬಕ್ಕೆ ತಿಪ್ಪೇನಹಳ್ಳಿಯ ಸ.ನಂ.77 ರಲ್ಲಿ 3 ನಿವೇಶನಗಳು ಬಂದಿರುತ್ತವೆ ಅಂದರೆ ಸದರಿ ನಿವೇಶನಗಳು ನನ್ನ ಗಂಡನ ನಿವೇಶನಗಳು ಆಗಿರುತ್ತವೆ ಎಂದು ಹೇಳಿರುತ್ತಾರೆ. ಸದರಿ ನಿವೇಶನಗಳ ಮೇಲೆ ನಾವು ಕಟ್ಟಡ ಕಟ್ಟಿರುತ್ತೇವೆ. ಈಗ ನಾವು ಆ ನಿವೇಶನಗಳಲ್ಲಿ ಕಟ್ಟಿದ ಕಟ್ಟಡದಲ್ಲಿಯೇ ವಾಸ ಮಾಡುತ್ತಿದ್ದೇವೆ. ನಾನು ಆ ನಿವೇಶನಗಳಲ್ಲಿ ಎಷ್ಟು ವಿಸ್ತೀರ್ಣದಲ್ಲಿ ಮನೆ ಕಟ್ಟಿರುತ್ತೇನೆ ಗೊತ್ತಿಲ್ಲ. ನನ್ನ ಗಂಡ ಮೈಕ್ರೋ ಲ್ಯಾಬ್ ಮೆಡಿಕಲ್ ಪ್ಯಾಕ್ಟರಿ ಅಲ್ಲಿ ಕೆಲಸ ಮಾಡುತ್ತಿದ್ದರು. ಸದರಿ ಮನೆಯನ್ನು ಕಟ್ಟಲು 1 ನೇ ಪ್ರತಿವಾದಿ ಸಹಾಯ ಮಾಡಿದ್ದರು ಅಂದರೆ ಸರಿಯಲ್ಲ, ನನ್ನ ಗಂಡ ನವ್ಯ ಪೈನಾನ್ಸ್ ನಡೆಸುತ್ತಿದ್ದರು ಎಂದು ಹೇಳುತ್ತಾರೆ. ನಾನು ಈ ದಾವೆಯಲ್ಲಿ 2 ನೇ ವಾದಿಯ ಪರವಾಗಿಯೂ ಸಹ ಸಾಕ್ಷಿ ಹೇಳುತ್ತಿದ್ದೇನೆ.

15. ನನ್ನ ಮದುವೆ ಆದ ಏಳು ವರ್ಷಗಳ ನಂತರ 2 ನೆ ವಾದಿಯ ಮದುವೆ ಆಗಿರುತ್ತದೆ. 2 ನೆ ವಾದಿ ತುಮಕೂರು ತಾಲ್ಲೂಕಿನ ಮಸ್ಕಲ್ ನಲ್ಲಿ ವಾಸವಿರುತ್ತಾರೆ. 2 ನೇ ವಾದಿಯ ಮದುವೆಯನ್ನು ಸಹ 1 ನೇ ಪ್ರತಿವಾದಿ ಮಾಡಿರುತ್ತಾರೆ. 2 ನೇ ವಾದಿ ಎಂದಿಗೂ ತಿಪ್ಪೇನಹಳ್ಳಿಯಲ್ಲಿ ವಾಸವಿರಲಿಲ್ಲ ಅಂದರೆ ನಿಜ. ಮಸ್ಕಲ್ ಅಲ್ಲಿ 2 ನೇ ವಾದಿ ಸ್ವಂತವಾಗಿ ಮನೆ ಕಟ್ಟಿಕೊಂಡಿರುತ್ತಾರೆ ಅಂದರೆ ನಿಜ. 2 ನೆ ವಾದಿ ತಮ್ಮ ಮದುವೆ ಆದ 10 ವರ್ಷಕ್ಕೆ ಮನೆ ಕಟ್ಟಿರುತ್ತಾರೆಂದರೆ ನಿಜ. 2004 ರಲ್ಲಿ 1 ನೇ ಪ್ರತಿವಾದಿ 2 ನೇ ವಾದಿಗೆ ಮನೆ ಕಟ್ಟಲು ರೂ. 20 ಲಕ್ಷಗಳನ್ನು ಭಾಗಶಃ ನಗದು ಮತ್ತು ಭಾಗಶಃ ಚೆಕ್ಕು ರೂಪದಲ್ಲಿ ಕೊಟ್ಟಿರುತ್ತಾರೆಂದರೆ ನಿಜ. ಸದರಿ ರೂ. 20 ಲಕ್ಷ ಗಳನ್ನು ಬಳಸಿಕೊಂಡು 2 ನೇ ವಾದಿ ಮಸ್ಕಲ್ ನಲ್ಲಿ ಮನೆ ಕಟ್ಟಿಕೊಂಡು ವಾಸವಿರುತ್ತಾರೆಂದರೆ ನಿಜ. 2 ನೇ ವಾದಿಗೆ ರೂ. 20 ಲಕ್ಷ ಹಣವನ್ನು ಕೊಟ್ಟ

ವಿಷಯವನ್ನು ಈ ದಾವೆ ಹೂಡುವಾಗ ನಮ್ಮ ವಕೀಲರಿಗೆ ಹೇಳಿದ್ದೆ. ನನ್ನ ಕುಟುಂಬದಲ್ಲಿ ಈಗ ತಿಪ್ಪೇನಹಳ್ಳಿ ಸ.ನಂ.77 ರ ಮೂರು ನಿವೇಶನಗಳು ಇರುತ್ತವೆ ಅಂದರೆ ನಿಜ. ಈ ಮೂರು ನಿವೇಶನಗಳು ನನ್ನ ಕುಟುಂಬಕ್ಕೆ ನನ್ನ ಮದುವೆ ಆದ ನಂತರ ಬಂದಿರುತ್ತವೆ ಅಂದರೆ ನನ್ನ ಮದುವೆ ಆದ ನಂತರ ತೆಗೆದುಕೊಂಡಿರುತ್ತೇವೆಂದು ಹೇಳುತ್ತಾರೆ.

**16.** ದಿಃ**04.05.2011** ರಲ್ಲಿ ನಮ್ಮ ತಂದೆಯ ಕುಟುಂಬದಲ್ಲಿ ಆಸ್ತಿಗಳ ವಿಲೇವಾರಿ ಬಗ್ಗೆ ಮಾತುಕತೆ ಆಗಿತ್ತು ಅಂದರೆ ಆಗಿರಬಹುದು ಆ ಮಾತುಕತೆ ಆಗಿದ್ದ ವಿಷಯ ನನಗೆ **2013** ರಲ್ಲಿ ಗೊತ್ತಾಗಿತ್ತು ಎಂದು ಹೇಳುತ್ತಾರೆ. ನನ್ನ **5** ಜನ ತಂಗಿಯರು ನನ್ನ ತಂದೆಯ ಮನೆಯಲ್ಲಿ ಆಸ್ತಿಗಳ ವಿಲೇವಾರಿ ಬಗ್ಗೆ ಮಾತುಕತೆ ಆಗಿದ್ದು ನನ್ನನ್ನು ಬಿಟ್ಟು ವಿಭಾಗ ಮಾಡಿಕೊಳ್ಳಲಾಗಿದೆ ಎಂದು ಹೇಳಿದ್ದರು. ನನ್ನ ತಂಗಿಯರು ಹಬ್ಬಕ್ಕೆಂದು ನನ್ನ ಮನೆಗೆ ಬಂದಾಗ ನನ್ನ ತಂದೆಯ ಮನೆಯಲ್ಲಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆಂದು ನನ್ನ ತಂಗಿಯರು ನನಗೆ ಹೇಳಿರುತ್ತಾರೆ ಎಂಬ ವಿಷಯವನ್ನು ಈ ದಾವೆ ಹೂಡುವಾಗ ನಾನು ನಮ್ಮ ವಕೀಲರಿಗೆ ಹೇಳಿಲ್ಲ. ನನ್ನ ತಂಗಿಯರು ದಿಃ**04.05.2011** ರಂದು ನನ್ನ ತಂದೆಯ ಮನೆಯಲ್ಲಿ ವಿಭಾಗ ಆಗಿರುತ್ತದೆ ಎಂದು ಹೇಳಿದ್ದ ವಿಷಯವನ್ನು ಸಾಬೀತುಪಡಿಸಲು ನನ್ನ ತಂಗಿಯರನ್ನು ಈ ದಾವೆಯಲ್ಲಿ ಸಾಕ್ಷಿ ಮಾಡಿಸುವುದಿಲ್ಲ.

**17.** **1** ನೇ ಪ್ರತಿವಾದಿಯ ಮನೆಯಲ್ಲಿ ದಿಃ**04.05.2011** ರಂದು ಮೌಖಿಕವಾಗಿ ಆದ ವಿಭಾಗದಲ್ಲಿ ನಾನು ಸಹ ಭಾಗವಹಿಸಿದ್ದೆ ಅಂದರೆ ಸರಿಯಲ್ಲ. ದಿಃ**04.05.201** ರಂದು ಆದ ವಿಭಾಗದ ಪ್ರಕಾರ ಕಂದಾಯ ಇಲಾಖೆಯಲ್ಲಿ ಖಾತೆ ಬದಲಾವಣೆ ಆಗಿರುತ್ತವೆ ಅಂದರೆ ನಿಜ. ಈ ದಾವೆಯನ್ನು ಹೂಡುವ ಮೊದಲೇ ಖಾತೆ ಬದಲಾವಣೆ ಆಗಿದ್ದ ವಿಷಯ ನನ್ನ ಗಮನದಲ್ಲಿತ್ತು ಅಂದರೆ ನಿಜ. ಸಾಕ್ಷಿ ಮುಂದುವರೆದು ನಂತರ ನಾನು **1** ನೇ ಪ್ರತಿವಾದಿಯನ್ನು ಭಾಗ ಕೇಳಿದ್ದು ಅವರು ಕೊಡುವುದಾಗಿ ಹೇಳುತ್ತಾ ಬಂದು ಕೊನೆಯಲ್ಲಿ ಬೈದು ಕಳಿಸಿರುತ್ತಾರೆ ನಂತರ ಈ ದಾವೆ ಹೂಡಿರುತ್ತೇನೆಂದು ಹೇಳುತ್ತಾರೆ. **2011** ರಲ್ಲಿ ಭಾಗ ಆದ ನಂತರ ನಾನು **1** ನೆ ಪ್ರತಿವಾದಿಗೆ ಮೊದಲನೇ ಬಾರಿಗೆ ಭಾಗ ಬೇಕು ಎಂದು **2013** ರಲ್ಲಿ ಕೇಳಿದ್ದೆ. ನಾನು ಭಾಗ ಕೊಡಬೇಕು ಎಂದು **1** ನೇ ಪ್ರತಿವಾದಿಯನ್ನು ಕೇಳಿದ್ದೆ. ನಾನು ನನ್ನ ತಂದೆಯನ್ನು ಕುರಿತು ಮನೆಯಲ್ಲಿ ಎಲ್ಲರಿಗೂ ಆಸ್ತಿಯನ್ನು ಕೊಟ್ಟಿದ್ದು, ನನಗೇಕೆ ಕೊಟ್ಟಿಲ್ಲ ಎಂದು ಕೇಳಿದ್ದೆ. ನಾನು ಜನವರಿ **2013** ರಲ್ಲಿ ಭಾಗ ಕೊಡಬೇಕು ಎಂದು ನನ್ನ ಸಹೋದರ ಸಹೋದರಿಯರನ್ನು ಕೇಳಿಲ್ಲ, **1** ನೇ ಪ್ರತಿವಾದಿಯನ್ನು ಮಾತ್ರ ಕೇಳಿರುತ್ತೇನೆ. ಸಾಕ್ಷಿ ಮುಂದುವರೆದು ನನ್ನ ಸಹೋದರ ಸಹೋದರಿಯರು ನನ್ನ ತಂದೆಯ ಮನೆಯಲ್ಲಿದ್ದುದರಿಂದ ನನ್ನ ತಂದೆಯನ್ನು ಮಾತ್ರ ಕೇಳಿದ್ದೆ ಎಂದು ಹೇಳುತ್ತಾರೆ.

**18.** ದಿಃ **04.05.2011** ಕ್ಕೆ **1** ನೇ ಪ್ರತಿವಾದಿಯ ಕುಟುಂಬದಲ್ಲಿ ಸ.ನಂ.**118/1** ರಲ್ಲಿ **6** ಗುಂಟೆ, ಸ. ನಂ.**118/2** ರಲ್ಲಿ **6** ಗುಂಟೆ, ಸ.ನಂ.**70** ರಲ್ಲಿ **2** ಎಕರೆ **33** ಗುಂಟೆ, ಸ.ನಂ.**65** ರಲ್ಲಿ **14** ಗುಂಟೆ, ಸ.ನಂ. **78/1** ರಲ್ಲಿ **7**

ಗುಂಟೆ ಜಮೀನು ಇರುತ್ತದೆ ಅಂದರೆ ನಿಜ. ಸಾಕ್ಷಿ ಮುಂದುವರೆದು ಸ.ನಂ.78/1 ರಲ್ಲಿ 17 ಗುಂಟೆ ಜಮೀನು ಇರುತ್ತದೆ, ಸ.ನಂ.60 ರಲ್ಲಿ ನನ್ನ ಅಜ್ಜನ ಮನೆ ಇರುತ್ತದೆ, ನಂ.539 ರಲ್ಲಿ ಎರಡು ನಿವೇಶನಗಳು ಇರತ್ತವೆ, ಮತ್ತು ಮಾವಿನ ತೋಟ ಇರುತ್ತವೆ. ಸ.ನಂ.60 ರಲ್ಲಿ ಮನೆ ಇದ್ದಿದ್ದು ನನ್ನ ಗಮನದಲ್ಲಿತ್ತು. ಸ.ನಂ.60 ರಲ್ಲಿ ಮನೆ ಇರುವ ವಿಷಯವನ್ನು ನಮ್ಮ ವಕೀಲರಿಗೆ ಹೇಳಿರುತ್ತೇನೋ ಇಲ್ಲವೋ ನೆನಪಿಲ್ಲ. ಸ.ನಂ.70/1 ರಲ್ಲಿ ಮಾವಿನ ತೋಟ ಇದೆ. ಸ.ನಂ.70/1 ನಮ್ಮ ಕುಟುಂಬಕ್ಕೆ ಸಂಬಂಧಿಸಿರುತ್ತದೆ ಎಂದು ತೋರಿಸಲು ದಾಖಲೆ ಇದೆ. ಸಾಕ್ಷಿ ಮುಂದುವರೆದು ಸ.ನಂ.70/9 3 ಎಕರೆ ಮಾವಿನ ತೋಟ ಇರುತ್ತದೆ ಎಂದು ಹೇಳುತ್ತಾರೆ. ಈ ದಾವೆಯನ್ನು ಹೂಡುವ ಕಾಲಕ್ಕೆ ನಮ್ಮ ವಕೀಲರಿಗೆ ಸ.ನಂ.70/9 ನ್ನು ವಾದ ಪತ್ರದಲ್ಲಿ ಸೇರಿಸಬೇಕು ಎಂದು ಹೇಳಿದ್ದೆ.

19. ದಿಃ04.05.2011 ರಲ್ಲಿ 1 ನೆ ಪ್ರತಿವಾದಿಯ ಕುಟುಂಬಕ್ಕೆ ಸ.ನಂ.18/4 ರಲ್ಲಿ 9 ಗುಂಟೆ, ಸ.ನಂ.33/1 ರಲ್ಲಿ 9 ಗುಂಟೆ, ಸ.ನಂ.34/7 ರಲ್ಲಿ 4 ಗುಂಟೆ ಮತ್ತು 12 ಗುಂಟೆ ಜಮೀನು ಇತ್ತು. ದಿಃ04.05.2011 ರ ಮೊದಲು ಮೇಲ್ಕಂಡ ಆಸ್ತಿಗಳು 1 ನೇ ಪ್ರತಿವಾದಿ ಕುಟುಂಬಕ್ಕೆ ಇತ್ತು ಎಂದು ತೋರಿಸಲು ಏನು ದಾಖಲೆಗಳು ಇದ್ದವು ನೆನಪಿಲ್ಲ. ಈ ದಾವೆಯನ್ನು ಹೂಡುವ ಕಾಲಕ್ಕೆ ಮೇಲ್ಕಂಡ ಆಸ್ತಿಗಳು 1 ನೇ ಪ್ರತಿವಾದಿಯ ಕುಟುಂಬಕ್ಕೆ ಇತ್ತು ಎಂದು ತೋರಿಸಲು ನನ್ನ ಕಡೆ ದಾಖಲೆಗಳು ಇವೆ. ಮೇಲ್ಕಂಡ ಆಸ್ತಿಗಳು ದಿಃ18.09.1995 ರಂದು ರಾಜಮ್ಮ ಎಂಬುವರಿಗೆ ಕ್ರಯ ಆಗಿರುತ್ತವೆ ಅಂದರೆ ಗೊತ್ತಿಲ್ಲ, ಕಾರಣ ನಾನು ಜಾಸ್ತಿ ಮನಗೆ ಬಂದಿರುವುದಿಲ್ಲ. 2 ನೆ ವಾದಿಯ ಮದುವೆಗೆ 1 ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದಿದ್ದರಿಂದ ಮೇಲೆ ಹೇಳಿದ ಜಮೀನುಗಳನ್ನು ರಾಜಮ್ಮ ಅವರಿಗೆ ಮಾರಾಟ ಮಾಡಿರುತ್ತಾರೆಂದರೆ, 2 ನೇ ವಾದಿಯ ಮದುವೆ ಮಾಡಲು ಕುಟುಂಬದ ಯಾವುದೇ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದು ಹೇಳುತ್ತಾರೆ.

20. ನನಗೆ ಕೃಷ್ಣಪ್ಪ ಮತ್ತು ಗೋವಿಂದಪ್ಪ ಇವರ ಪರಿಚಯ ಇದ್ದು ಅವರಿಬ್ಬರೂ 1 ನೇ ಪ್ರತಿವಾದಿಯ ತಮ್ಮಂದಿರು ಆಗಿರುತ್ತಾರೆ. ನಿವೇಶನ ನಂಬರ್ 60, 65*55 ಅಡಿ ವಿಸ್ತೀರ್ಣದ ನಿವೇಶನ ಪೂರ್ವಕ್ಕೆ 2 ಅಡಿ ರಸ್ತೆ ಮತ್ತು ಮುನಿಯಪ್ಪನ ಮಕ್ಕಳ ಜಮೀನು, ಪಶ್ಚಿಮಕ್ಕೆ ಗಂಗಯ್ಯ ಮತ್ತು ನರಸಯ್ಯ ರವರ ಜಮೀನು, ಉತ್ತರಕ್ಕೆ 4 ಅಡಿ ರಸ್ತೆ ಮತ್ತು ಪಾಪಯ್ಯನ ಮಕ್ಕಳ ಜಮೀನು, ದಕ್ಷಿಣಕ್ಕೆ ರಾಜ ಬೀದಿ ಇರುವ ನಿವೇಶನ, ಈಗ ಕೃಷ್ಣಪ್ಪ ಹಾಗೂ ಗೋವಿಂದಪ್ಪ ಅವರ ಹೆಸರಿನಲ್ಲಿರುತ್ತದೆ ಅಂದರೆ ನಿಜ. ನನ್ನ ತಂಗಿ ಶಾರದಮ್ಮ ಅವರ ಮದುವೆ ಮಾಡಲು ಮೇಲ್ಕಂಡ ನಿವೇಶನವನ್ನು 1 ನೇ ಪ್ರತಿವಾದಿ ತಮ್ಮ ತಮ್ಮಂದಿರಿಗೆ ಮಾರಾಟ ಮಾಡಿದ್ದರು ಅಂದರೆ ಸರಿಯಲ್ಲ. ಈ ದಾವೆಯನ್ನು ಹಾಡುವ ಮೊದಲೇ ಕೃಷ್ಣಪ್ಪ ಹಾಗೂ ಗೋವಿಂದಪ್ಪ ರವರು ಮೇಲೆ ಹೇಳಿದ ನಿವೇಶನವನ್ನು ಪಾರ್ವತಮ್ಮ ಅವರಿಗೆ ಮಾರಾಟ ಮಾಡಿದ್ದರು ಅಂದರೆ ಗೊತ್ತಿಲ್ಲ.

21. 7 ನೇ ದಾವಾ ಆಸ್ತಿಯಲ್ಲಿರುವ ನಂಬರ್ 539 ರಲ್ಲಿರುವ ಎರಡು ನಿವೇಶನಗಳಲ್ಲಿ ನನ್ನ ತಂದೆ ತಮ್ಮ

ಕುಟುಂಬದ ಅವಶ್ಯಕತೆಗಳಿಗಾಗಿ ದಿ:22.04.2006 ರಂದು ಒಂದು ನಿವೇಶನವನ್ನು ಜಯಲಕ್ಷ್ಮಮ್ಮ ಅವರಿಗೆ ಮತ್ತು ಇನ್ನೊಂದು ನಿವೇಶನವನ್ನು ಬಿ ಟಿ ಕಿರಣ್ ಅವರಿಗೆ ಮಾರಾಟ ಮಾಡಿದ್ದರು ಅಂದರೆ ಗೊತ್ತಿಲ್ಲ. ಈ ನಿವೇಶನಗಳನ್ನು ಮಾರಾಟ ಮಾಡಿ ಇರುವ ಉಳಿಕೆ ಜಾಗದಲ್ಲಿ ನನ್ನ ತಂದೆಯ ತಮ್ಮ ಆಂಜಪ್ಪ ರವರು ಮನೆ ಕಟ್ಟಿಕೊಂಡು ವಾಸವಿರುತ್ತಾರೆಂದರೆ ನಿಜ. 2 ನೇ ಪ್ರತಿವಾದಿ ಬಡ್ಡಿಗಾಗಿ ಸಾಲ ಕೊಡುವ ವ್ಯವಹಾರ, ರಿಯಲ್ ಎಸ್ಟೇಟ್ ಮತ್ತು ರಾಗಿ ಮಿಷನ್ ಇಟ್ಟುಕೊಂಡಿರುತ್ತಾರೆಂದರೆ ನಿಜ. ಸಾಕ್ಷಿ ಮುಂದುವರೆದು ಆಗ ಮೇಲೆ ಹೇಳಿದ ವ್ಯವಹಾರಗಳನ್ನು ಮಾಡುತ್ತಿರಲಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಗೆ ಪ್ರತ್ಯೇಕವಾಗಿ ವರಮಾನ ಇರುತ್ತದೆ ಮತ್ತು ಪ್ರತ್ಯೇಕವಾಗಿ ಜೀವನ ಮಾಡುತ್ತಿದ್ದಾರೆಂದರೆ ಇಬ್ಬರೂ ಸೇರಿ ವ್ಯವಹಾರ ಮಾಡುತ್ತಾರೆಂದು ಹೇಳುತ್ತಾರೆ. 2004 ರಲ್ಲಿ 1 ನೇ ಪ್ರತಿವಾದಿ ಹಾಗೂ 2 ನೇ ಪ್ರತಿವಾದಿ ವಿಭಾಗ ಆಗಿರುತ್ತಾರೆ ಅಂದರೆ ಗೊತ್ತಿಲ್ಲ, ಆದರೆ ಈಗ ಜೊತೆಯಲ್ಲೇ ಇರುತ್ತಾರೆಂದು ಹೇಳುತ್ತಾರೆ.

22. ನನ್ನ ತಾಯಿ ತೀರಿಕೊಂಡು ಎರಡು ವರ್ಷ ಆಗಿರುತ್ತದೆ. ನನ್ನ ತಾಯಿ ಜೀವಂತ ಇದ್ದಾಗ ಅವರು 1 ಹಾಗೂ 2 ನೇ ಪ್ರತಿವಾದಿ ಜೊತೆ ವಾಸವಿದ್ದರು. ಪಿತ್ರಾರ್ಜಿತ ಮನೆ ಎರಡು ಮಹಡಿ ಇರುತ್ತದೆ ಅಂದರೆ ನಿಜ. ನನ್ನ ತಂದೆ ತಾಯಿ ಕೆಳ ಮಹಡಿಯ ಮನೆಯಲ್ಲಿ ವಾಸವಿದ್ದರು ಹಾಗೂ 2 ನೇ ಪ್ರತಿವಾದಿ ಹಾಗೂ ಅವರ ಕುಟುಂಬ ಮೇಲ್ ಮಹಡಿಯಲ್ಲಿ ವಾಸವಿದ್ದರು ಅಂದರೆ ನಿಜ. ಸಾಕ್ಷಿ ಮುಂದುವರೆದು ಊಟ ಒಂದೇ ಕಡೆ ಮಾಡುತ್ತಿದ್ದರು ಜೊತೆಯಲ್ಲಿಯೇ ಇದ್ದರು ಎಂದು ಹೇಳುತ್ತಾರೆ, ನನ್ನ ತಾಯಿಗೆ ಓಡಾಡಲು ಆಗುತ್ತಿರಲಿಲ್ಲವೆಂದು ಕೆಳ ಮಹಡಿಯಲ್ಲಿದ್ದರು ಎಂದು ಹೇಳುತ್ತಾರೆ. ತಾವರೆಕೆರೆ ಅಲ್ಲಿ 2 ನೇ ಪ್ರತಿವಾದಿಯ ಕುಟುಂಬಕ್ಕೆ ಮತ್ತು 1 ನೇ ಪ್ರತಿವಾದಿ ಕುಟುಂಬಕ್ಕೆ ಪ್ರತ್ಯೇಕ ಪಡಿತರ ಚೀಟಿಗಳು ಇದ್ದವು ಅಂದರೆ ಗೊತ್ತಿಲ್ಲ. ಇಂದಿಗೂ ಸಹ ನನ್ನ ತಂದೆ ತಾಯಿ ಕೆಳ ಮಹಡಿಯಲ್ಲಿ ವಾಸವಿದ್ದು 2 ನೆ ಪ್ರತಿವಾದಿ ಹಾಗೂ ಅವರ ಕುಟುಂಬ ಮೇಲ್ಮಮಹಡಿಯಲ್ಲಿ ವಾಸವಿರುತ್ತಾರೆಂದರೆ ಸರಿಯಲ್ಲ.

23. ಇಂದಿಗೂ ಸಹ 1 ನೇ ಪ್ರತಿವಾದಿ ಹೋಟೆಲ್‌ನಲ್ಲಿ ಊಟ ಮಾಡಿ ದೋಬಿಗೆ ಬಟ್ಟೆಯನ್ನು ತೊಳೆಯಲು ಕೊಟ್ಟು ಇಂದಿಗೂ ಸಹ ಪ್ರತ್ಯೇಕವಾಗಿ ವಾಸವಿದ್ದಾರೆಂದರೆ ಸರಿಯಲ್ಲ. ಈ ದಾವೆಯನ್ನು ಹೂಡಿದ ನಂತರ 1 ಮತ್ತು 2 ನೇ ಪ್ರತಿವಾದಿಯ ಮದ್ಯೆ ಹೊಡೆದಾಟ ಆಗಿ 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಹೊಡೆದು ನಮ್ಮ ಮನೆಯಲ್ಲಿ ವಾಸವಿರುತ್ತಾರೆಂದರೆ ಸರಿಯಲ್ಲ. ಸ.ನಂ.58/5 1 ಎಕರೆ 10 ಗುಂಟೆ ಜಮೀನು ಮತ್ತು ಸ.ನಂ.69/4 3 ಗುಂಟೆ ಜಮೀನನ್ನು 2 ನೇ ಪ್ರತಿವಾದಿಗೆ ದಿ:21.06.2004 ರಂದು ತಮ್ಮ ಸ್ವತಂ ಆದಾಯದಿಂದ ಖರೀದಿ ಮಾಡಿರುತ್ತಾರೆಂದರೆ ಸರಿಯಲ್ಲ. ದಿ:21.06.2004 ರಂದು 1 ನೇ ಪ್ರತಿವಾದಿಗೆ ಮೇಲ್ಕಂಡ ಆಸ್ತಿಗಳನ್ನು 2 ನೇ ಪ್ರತಿವಾದಿ ಹೆಸರಿಗೆ ಖರೀದಿ ಮಾಡಿ ಕೊಟ್ಟಿರುವ ಬಗ್ಗೆ ಅಷ್ಟೊಂದು ಆದಾಯ ಇತ್ತು ಎಂದು ತೋರಿಸಲು ದಾಖಲೆಗಳು ಇಲ್ಲ. ಸ.ನಂ.48/5 ಮತ್ತು 49/4 ರ ಖಾತೆ

2 ನೇ ಪ್ರತಿವಾದಿ ಹೆಸರಿಗೆ ಆಗಿರುತ್ತದೆ ಅಂದರೆ ಮಾಡಿಸಿಕೊಂಡಿರುತ್ತಾರೆಂದು ಹೇಳುತ್ತಾರೆ. ಈ ದಾವೆಯನ್ನು ಹೂಡಿದ ದಿನದಿಂದ ಇಲ್ಲಿಯವರೆಗೂ ಸ.ನಂ.48/5 ಮತ್ತು 49/4 ರಲ್ಲಿ 2 ನೇ ಪ್ರತಿವಾದಿ ಬೆಳೆ ಬೆಳೆಯುತ್ತಿದ್ದಾರೆಂದರೆ ಯಾವುದೇ ಬೆಳೆ ಬೆಳೆದಿಲ್ಲ ಎಂದು ಹೇಳುತ್ತಾರೆ. ಈ ಎರಡೂ ಆಸ್ತಿಗಳನ್ನು 2 ನೇ ಪ್ರತಿವಾದಿ ದಿ:22.06.2007 ರಂದು 8 ನೆ ಪ್ರತಿವಾದಿ ಹೆಸರಿಗೆ ದಾನ ಪತ್ರ ಮಾಡಿಕೊಟ್ಟಿರುತ್ತಾರೆಂದರೆ ನಿಜ, ಸಾಕ್ಷಿ ಮುಂದುವರೆದು ಈ ದಾವೆ ಹೂಡಿದ ನಂತರ ದಾನ ಪತ್ರ ಮಾಡಿರುತ್ತಾರೆಂದು ಹೇಳುತ್ತಾರೆ.

24. ಸ.ನಂ.48/5 ಮತ್ತು 49/4 ಕ್ಕೆ 8 ನೇ ಪ್ರತಿವಾದಿ ಸ್ವಾಧೀನದಾರರು ಮತ್ತು ಮಾಲೀಕರು ಆಗಿರುತ್ತಾರೆಂದರೆ ಸರಿಯಲ್ಲ. 4 ರಿಂದ 7 ನೇ ದಾವಾ ಆಸ್ತಿಗಳು ಈ ದಾವೆ ಹೂಡುವ ಕಾಲಕ್ಕೆ ಲಕ್ಷ್ಮಮ್ಮ, ರಾಜಮ್ಮ, ಕೃಷ್ಣಪ್ಪ, ಗೋವಿಂದಪ್ಪ, ಜಯಲಕ್ಷ್ಮಮ್ಮ, ನಂಜಪ್ಪ ಮತ್ತು ಕಿರಣ್ ಅವರ ಹೆಸರಿನಲ್ಲಿತ್ತು ಅಂದರೆ ಇರಬಹುದು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ನನ್ನ ಅಜ್ಜನ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆಂದು ಹೇಳುತ್ತಾರೆ. 8 ನೇ ದಾವಾ ಆಸ್ತಿಯನ್ನು 2 ನೇ ಪ್ರತಿವಾದಿ ದಿ:03.05.2006 ರಂದು ಖರೀದಿ ಮಾಡಿರುತ್ತಾರೆಂದರೆ 1 ಮತ್ತು 2 ನೇ ಪ್ರತಿವಾದಿಗಳು ಸೇರಿ ಖರೀದಿಸಿದ್ದರು ಎಂದು ಹೇಳುತ್ತಾರೆ. 8 ನೇ ದಾವಾ ಆಸ್ತಿಯನ್ನು ಖರೀದಿ ಮಾಡಲು ಕುಟುಂಬದಲ್ಲಿ ಅಷ್ಟೊಂದು ಹಣ ಇತ್ತು ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸುತ್ತೇನೆ. 8 ನೇ ದಾವಾ ಆಸ್ತಿ ಪಹಣಿ ಮತ್ತು ಖಾತೆ 2 ನೇ ಪ್ರತಿವಾದಿ ಹೆಸರಿನಲ್ಲಿರುತ್ತದೆ ಅಂದರೆ ನಿಜ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ 2 ನೇ ಪ್ರತಿವಾದಿ ಹೆಸರಿಗೆ ಮಾಡಿರುತ್ತಾರೆಂದು ಹೇಳುತ್ತಾರೆ.

25. ಸ.ನಂ.67/1 ಜಮೀನಿನಲ್ಲಿ ಮನೆಗಳನ್ನು ಕಟ್ಟಿರುತ್ತಾರೆ. ಸ.ನಂ.67/1 ಶಾಲೆಯ ಜಾಗ ಆಗಿದ್ದು ಅದರಲ್ಲಿ ಸುಮಾರು 15 ಮನೆಗಳು ಇರಬಹುದು. ಸದರಿ ಮನೆಗಳಲ್ಲಿ ಯಾರು ವಾಸವಿರುತ್ತಾರೆ ಗೊತ್ತಿಲ್ಲ. ಆ ಮನೆಗಳಲ್ಲಿ ನಮ್ಮ ಕುಟುಂಬದವರು ವಾಸವಿಲ್ಲ. ಆ ಮನೆಗಳ ಸ್ವಾಧೀನತೆಯನ್ನು ನಮ್ಮ ಕುಟುಂಬದವರು ಹೊಂದಿಲ್ಲ. ಈ ದಾವೆಯನ್ನು ಹೂಡುವ ಕಾಲಕ್ಕೆ ಸ.ನಂ.67/1 ರಲ್ಲಿ ಮನೆಗಳನ್ನು ಕಟ್ಟಿದ್ದ ವಿಷಯ ನನಗೆ ಗೊತ್ತಿತ್ತು ಅಂದರೆ ಗೊತ್ತಿರಲಿಲ್ಲ. ಬಿ ಷೆಡ್ಯೂಲ್ ಆಸ್ತಿಯ 3 ನೇ ದಾವಾ ಆಸ್ತಿಯನ್ನು ಸರ್ಕಾರದವರು 2 ನೇ ಪ್ರತಿವಾದಿಗೆ ಮಂಜೂರು ಮಾಡಿರುತ್ತಾರೆಂದರೆ ಅದು ನನ್ನ ಚಿಕ್ಕಪ್ಪನ ಆಸ್ತಿ ಎಂದು ಹೇಳುತ್ತಾರೆ. ನನ್ನ ಚಿಕ್ಕಪ್ಪ ತಮ್ಮ ಮಗನಿಗೆ ಆರೋಗ್ಯ ಸರಿ ಇರಲಿಲ್ಲವೆಂದು 2 ನೇ ಪ್ರತಿವಾದಿ ಕಡೆಯಿಂದ ಹಣವನ್ನು ಪಡೆದಿದ್ದು ಸದರಿ ಮೂರನೇ ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ಯಾವಾಗ ಮಾರಾಟ ಮಾಡಿದ್ದರು ನನಗೆ ಗೊತ್ತಿಲ್ಲ. 3 ನೇ ದಾವಾ ಆಸ್ತಿಯನ್ನು ಖರೀದಿ ಮಾಡಿದ ನಂತರ 2 ನೇ ಪ್ರತಿವಾದಿ ಸದರಿ ಆಸ್ತಿಯ ಸ್ವಾಧೀನತೆಯನ್ನು ಹೊಂದಿರುತ್ತಾರೆ ಮತ್ತು ಖಾತೆ ಹಾಗೂ ಪಹಣಿ ಅವರ ಹೆಸರಿನಲ್ಲಿರುತ್ತದೆ ಅಂದರೆ ನಿಜ. ನಾನು ದಾವಾ ಆಸ್ತಿಗಳ ಸ್ವಾಧೀನತೆಯನ್ನು ಹೊಂದಿಲ್ಲ ಎಂದರೆ ನಿಜ, ಆದಕಾರಣ ಈ ದಾವೆಯನ್ನು ಹೂಡಿರುತ್ತೇನೆಂದು ಹೇಳುತ್ತಾರೆ. ದಿ:04.05.2011 ರಿಂದ ನಾನು ಯಾವುದೇ

ದಾವಾ ಆಸ್ತಿಗಳ ಸ್ವಾಧೀನತೆಯನ್ನು ಹೊಂದಿಲ್ಲ ಅಂದರೆ ನಿಜ, ಕಾರಳಣ ಆ ಆಸ್ತಿಗಳನ್ನು 1 ಮತ್ತು 2 ನೇ ಪ್ರತಿವಾದಿಗಳು ಮಾಡಿಕೊಂಡು ಹೋಗುತ್ತಿದ್ದರು ಎಂದು ಹೇಳುತ್ತಾರೆ.

26. 10 ನೇ ದಾವಾ ಆಸ್ತಿಯನ್ನು ಬಾಡಿಗೆ ಇಂದ ಬಂದ ಹಣ ಮತ್ತು ವ್ಯವಹಾರಗಳಿಂದ ಬಂದ ಹಣದಿಂದ ಮತ್ತು ನನ್ನ ತಂದೆಯ ಪಿಂಚಣಿಯಿಂದ ತೆಗೆದುಕೊಂಡಿರುತ್ತಾರೆ. 10 ನೇ ದಾವಾ ಆಸ್ತಿ 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಅಂದರೆ ಅದನ್ನು ಮನೆಯ ಹಣದಿಂದ ಖರೀದಿ ಮಾಡಿದ್ದು ಹೇಗೆ ಮಾಡಿರುತ್ತಾರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 10 ನೇ ದಾವಾ ಆಸ್ತಿ ಈಗ 9 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಅಂದರೆ ನನ್ನ ತಂದೆಯ ಆಸ್ತಿಗಳು ಅವರ ಹೆಸರಿನಲ್ಲಿರುತ್ತವೆ ಎಂದು ಹೇಳುತ್ತಾರೆ. ಈ ದಾವೆ ಹೂಡುವ ಕಾಲಕ್ಕೆ 10 ನೇ ದಾವಾ ಆಸ್ತಿ 9 ನೇ ಪ್ರತಿವಾದಿ ಹೆಸರಿನಲ್ಲಿದ್ದಿದ್ದು ನನಗೆ ಗೊತ್ತಿತ್ತು ಅಂದರೆ ನಿಜ. ಯಾವುದೇ ದಾವಾ ಆಸ್ತಿಗಳಲ್ಲಿ ನನಗೆ ಭಾಗ ಬರಬೇಕಾಗಿಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**